ಉತ್ತರ ಹೇಳಬೇಕು ಎನ್ನುವುದು ಇಬ್ಬರಿಗೂ ಹೊಳೆಯಲಿಲ್ಲ.

ಸಾವರಿಸಿಕೊಂಡ ಅಮರನಾರಾಯಣ, 'ಕೆರೆಯಲ್ಲಿ ಹೆಣಗಳು ತೇಲ್ತಾ ಇರೋದನ್ನ ಪೊಲೀಸರಿಗೆ ತಿಳಿಸದೆ ಇರಕ್ಕಾಗಲ್ಲ. ಸತ್ತಿರೋದು ಹೆಂಗಸು, ಮಗು ಅಂತೀರ. ಅವ್ರು ಈ ಊರವರೇ ಆಗಿದ್ದರೆ? ಬೇವರ್ಸಿ ಹೆಣಗಳಾದರೂ ಅವನ್ನು ನಾವು ಮುಟ್ಟಂಗಿಲ್ಲ. ಪೊಲೀಸರಿಗೆ ಹೇಳಬೇಕಾಗುತ್ತೆ. ಕಾನೂನು ಪ್ರಕಾರ ಪೊಲೀಸರಿಗೆ ತಿಳಿಸದೆ ಹೆಣ ಎತ್ತಂಗಿಲ್ಲ... ಪಂಚಾಯ್ತಿಗೆ ವಿಷಯ ಗೊತ್ತಾದ ಮೇಲೂ ಪೊಲೀಸರಿಗೆ ಸುದ್ದಿ ತಿಳಿಸದೇ ಇದ್ದರೆ ಅದು ಅಫೆನ್ಸ್ ಆಗುತ್ತೆ. ಮೊದಲು ಒಂದ್ ಕಂಪ್ಲೇಂಟ್ ಕೊಡಣ. ಪೊಲೀಸರೇ ಬಂದು ಹೆಣ ತೆಗೆಸಲಿ. ಕೊರೊನಾ ಇತ್ತೋ ಇಲ್ಲವೊ ಅನ್ನೋದನ್ನ ಅವರೇ ಟೆಸ್ಟ್ ಮಾಡಿಸ್ತಾರೆ. ಕೊರೊನಾ ಇದ್ದರೆ ಕೆರೆ ನೀರನ್ನು ಸಪ್ಲೈ ಮಾಡಕಾಗಲ್ಲ. ನೀರನ್ನು ಲ್ಯಾಬ್‌ಗೆ ಕಳಿಸಿ ಟೆಸ್ಟ್ ಮಾಡಿಸಬೇಕಾಗುತ್ತೆ. ಇಡೀ ಕೆರೆಗೆ ಕ್ಲೋರಿನೇಷನ್ ಮಾಡಿಸಬೌದು. ಆದರೆ, ಖರ್ಚಿನ ಬಾಬತ್ತು. ಅಲ್ಲೀತನಕ ಎಲ್ಲಿಂದಲಾದರೂ ಟ್ಯಾಂಕರಿನಲ್ಲಿ ತಂದು ಸಪ್ಲೆ ಮಾಡಬಹುದು. ಪಿಡಿಒ ಆಗಿ ಪೊಲೀಸರಿಗೆ ರಿಪೋರ್ಟ್ ಮಾಡೋದು ನನ್ನ ಕರ್ತವ್ಯ' ಅನ್ನುತ್ತ ಚೇರ್ಮನ್ನರ ಮುಖ ನೋಡಿದ.

'ಕೆರೆಯಲ್ಲಿ ಹೆಣಗಳು ಬಿದ್ದಿವೆ. ನಾಳೆ ಸಪ್ಲೆ ಇರಲ್ಲ. ಮನೆಗಳಲ್ಲಿ ಇರೋ ನೀರನ್ನ ನೋಡಿಕಂಡ್ ಜೋಪಾನವಾಗಿ ಬಳಸಿ ಅಂತ ಡಂಗೂರು ಹೊಡೆಸಲೇ' ಅಂತ ಚೇರ್ಮನ್ನರತ್ತ ನೋಡುತ್ತ ಕೇಳಿದ.

'ಪಿಡಿಒ ಸಾಹೇಬರು ಹೇಳಿದ್ದು ಸರಿಯಾಗೇ ಐತೆ. ಪೊಲೀಸರಿಗೆ ತಿಳಿಸದೆ ಏನೂ ಮಾಡಂಗಿಲ್ಲ... ಊರ ಜನ ಏನಾದರೂ ಹೇಳಿಕೊಳ್ಳಲಿ. ಕೆರೆಗೆ ಹೆಣಗಳು ಬಿದ್ದಿರೋ ವಿಷಯ ಮುಚ್ಚಿಡಕೆ ಆಗಲ್ಲ. ಸದ್ಯಕ್ಕೆ ಹೆಣಗಳು ತೇಲ್ತಾ ಇರೋ ವಿಷಯ ಹೇಳದು ಬ್ಯಾಡ. ಪಂಪ್ ಕೆಟ್ಟಿದೆ, ಅದು ಸರಿ ಹೋಗೋವರಗೂ ನೀರು ಬಿಡಲ್ಲ ಅಂತ ಡಂಗೂರ ಹೊಡೆಸಬೌದಲ್ಲ' ಎನ್ನುತ್ತ ರಾಜಣ್ಣ ಪಿಡಿಒ ಮಾತಿಗೆ ಸಣ್ಣ ತಿದ್ದುಪಡಿ ಸೂಚಿಸಿದ.

ತಕ್ಷಣಕ್ಕೆ ಅದೇ ಸರಿ ಎನ್ನುವ ತೀರ್ಮಾನಕ್ಕೆ ಚೇರ್ಮನ್ನರು ಬಂದು ಬಿಟ್ಟರು. 'ಅಮರನಾರಾಣಪ್ಪ ನೀವು ಹೋಗಿ ಪಂಚಾಯ್ತಿ ಜವಾನಂಗೆ ಫೋನು ಮಾಡಿ ಡಂಗೂರ ಹೊಡೆಯೋದಕ್ಕೆ ವ್ಯವಸ್ಥೆ ಮಾಡ್ರಿ. ಪಾಳ್ಯದವರಿಗೂ ನೀರು ಬರಲ್ಲ ಅಂಬದು ಗೊತ್ತಾಗಬೇಕು. ಅಲ್ಲೂ ಡಂಗೂರ ಹೊಡೆಸಬೇಕು'

